**ದಿಃ 13.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲು 2 ರಿಂದ 5 ಎದುರುದಾರಪರ ವಕೀಲರಿಂದಃ**

ಎದುರದಾರ ನಂ.2 ರಿಂದ 5 ರವರು ಮೂಲ ದಾವೆ ಸಂಖ್ಯೆ 394/2002ರಲ್ಲಿ ಪಕ್ಷಗಾರರಾಗಿರಲಿಲ್ಲ ಎಂದರೆ ಸರಿ. ರಿ.ಸ.ನಂ.599ಕ್ಕೆ 2 ರಿಂದ 5ನೇ ಎದುರದಾರರ ಪೂರ್ವಜ್ಜರ ಹೆಸರುಗಳು ಪಹನಿಯಲ್ಲಿ ದಾಖಲಿರುತ್ತವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಪಹನಿಯಲ್ಲಿಯ ಹೆಸರುಗಳನ್ನು ನಾನು ಬೆರೆಯವರಿಂದ ಓದಿಸಿ ತಿಳಿದುಕೊಂಡಿರುತ್ತೇನೆ. ಎದುರದಾರ ನಂ.2 ರಿಂದ 5 ರವರು ಸಲ್ಲಿಸಿರುವ ತಕಾರಾರಿನಲ್ಲಿಯ ವಿಷಯಗಳನ್ನು ನಾನು ತಿಳಿದುಕೂಂಡಿರುತ್ತೇನೆ. ಎದುರುದಾರ 2ರವರ ಹೆಸರು ಮನ್ನಪ್ಪಾ ದೊಡ್ಡನ್ನವರ ಎಂದರೆ ಸರಿ. ನನ್ನ ಮುಖ್ಯ ಅರ್ಜಿಯಲ್ಲಿ 2 ನೇ ಎದುರುದಾರರ ಅಡ್ಡ ಹೆಸರು ದಿಡ್ಡನ್ನವರು ಎಂದು ತಪ್ಪಾಗಿ ತೋರಿಸಲಾಗಿರುತ್ತದೆ ಎಂದರೆ ಸರಿ. 4ನೇ ಎದುರದಾರರ ಹೆಸರು ಜಿನ್ನಪ್ಪಾ ನೇಮಪ್ಪಾ ತಮದಡ್ಡಿ ಎಂದರೆ ಸರಿ, ನನ್ನ ಮುಖ್ಯ ಅರ್ಜಿಯಲ್ಲಿ 4 ನೇ ಎದುರದಾರರ ಹೆಸರನ್ನು ಚೀನ್ನಪ್ಪಾ ಎಂದು ತಪ್ಪಾಗಿ ಬರೆಸಿರುತ್ತದೆ ಎಂದರೆ ಸರಿ. 5ನೇ ಎದುರದಾರನ ಹೆಸರು ಬಾಹುಬಲಿ ನಿಂಗಪ್ಪಾ ಚೌಗಲಾ ಎಂದರೆ ಸರಿ. 5ನೆ ಎದುರುದಾರ ತಂದೆಯ ಹೆಸರನ್ನು ಮುಖ್ಯ ಅರ್ಜಿಯಲ್ಲಿ ನಾಗಪ್ಪಾ ಎಂದು ತಪ್ಪಾಗಿ ಬರೆಯಲಾಗಿರುತ್ತದೆ ಎಂದರೆ ಸರಿ. ಎದುರದಾರ ನಂ.2 ಮತ್ತು ಎದುರುದಾರ ನಂ.6 ಮನ್ನಪ್ಪಾ ರಾಮಪ್ಪಾ ದೊಡ್ಡನ್ನವರ ಇಬ್ಬರು ಒಬ್ಬರೆ ಎಂದರೆ ಸರಿ. ನಾನು ಹಾಗೂ 2 ರಿಂದ 5ನೇ ಎದುರುದಾರರು ಒಂದೆ ಊರಿನವರು ಎಂದರೆ ಸರಿ. ನನಗೆ ಸದರಿ ಎದುರುದಾರರ ಸರಿಯಾದ ಹೆಸರುಗಳು ಗೊತ್ತಿದ್ದರು ಸಹ ತಪ್ಪಾಗಿ ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ .

2. ನಾನು ಸರ್ವೇ ನಂ. 599ರಲ್ಲಿ, ಕೇವಲ 5 ಎಕರೆ 34 ಗುಂಟೆಗೆ ಮಾತ್ರ ದಾವೆ ಸಲ್ಲಿಸಿದ್ದ ಎಂದರೆ ಸರಿಯಲ್ಲ. ಮೂಲ ದಾವೆಯಲ್ಲಿ ನೀಡಿರುವ ತೀರ್ಪಿನ ಬಗ್ಗೆ ತಿಳಿದುಕೊಂಡಿರುತ್ತೇನೆ. ನನಗೆ ಕೇವಲ 5 ಎಕರೆ 34 ಗುಂಟೆಯಲ್ಲಿ ಅರ್ಧ ಪಾಲು ಬರಬೇಕು ಎಂದರೆ ಸರಿಯಲ್ಲ. ಸರ್ವೇ ನಂ. 599 ಮೂಲತಹಃ 11 ಎಕರೆ 27 ಗುಂಟೆ ವಿಸ್ತೀರ್ಣ ಇದ್ದು, 8 ಗಂಟೆ ಕರಾಬು ಜಮೀನು ಇದ್ದು, ಉಳಿದ ವಿಸ್ತೀರ್ಣ ಕೇವಲ 11 ಎಕರೇ 19 ಗುಂಟೆ ಇರುತ್ತದೆ ಎಂದರೆ ಸರಿ. ದಿಃ 17-03-1943ರಲ್ಲಿ ನನ್ನ ಮಾವ ಲಗಮಾ ನಿಂಗಪ್ಪಾ ಗಸ್ತಿ ಎನ್ನುವವರು ನಾಗಪ್ಪಾ ನೀಜಲಿಂಗಪ್ಪಾ ಕುಂದರಗಿ ಅವರಿಂದ ಸದರಿ ಜಮೀನಲ್ಲಿ ½ ಹಿಸ್ಸೆ ಖರೀದಿ ಪಡೆದಿರುತ್ತಾರೆ ಎಂದರೆ ಸರಿ. ದಿಃ 05-03-1943 ರಲ್ಲಿ ಮಲ್ಲಪ್ಪಾ ಜಿನ್ನಪ್ಪಾ ತಮದಡ್ಡಿ ಎನ್ನುವವರು ನಾಗಪ್ಪಾ ಅಪ್ಪಯ್ಯಪ್ಪಾ ಪಟ್ಟಣಶೇಟ್ಟಿ ಕಡೆಯಿಂದ ಇನ್ನೂಳಿದ ಅರ್ಧ ಹಿಸ್ಸೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಲ್ಲಪ್ಪಾ ಅವರು ನಾಗಪ್ಪ ಅವರಿಂದ ಖರೀದಿಸಿದ ವಿಷಯ ಗೋತ್ತಿದ್ದರು ಸಹ ಸರಿಯಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ವೇನಂ. 599ರಲ್ಲಿಯ ನಮ್ಮ ಹಿಸ್ಸೆಯ ಚಕ್ ಬಂದಿಯನ್ನು ಪೂವಕ್ಕೆ ಹಣಬರ ಪಂಗಡದವರು, ಪಶ್ಚಿಮಕ್ಕೆ ರಸ್ತೆ ಉತ್ತರಕ್ಕೆ ವಡ್ಡರ ಪಂಗಡದವರು, ದಕ್ಷಿಣಕ್ಕೆ ಅರಣ್ಯ ಪ್ರದೇಶ ವಿರುತ್ತದೆ ಎಂದರೆ ಸರಿ. ಸದರಿ ಉತ್ತರಕ್ಕಿರುವ ಜಮೀನನ್ನು ಎರಡನೇ ಎದುರುದಾರರ ತಂದೆ ಖರೀದಿ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎರಡನೇ ಎದುರುದಾರ ಹಣಬರ ಸಮಾಜಕ್ಕೆ ಸೇಪರಿದವರು ಎಂದರೆ ಸರಿ. ಸದರಿ ಹಣಬರ ಪಂಗಡದವರ ಪೂರ್ವ ದಿಕ್ಕಿಗೆ ಎದುರದಾರ ನಂ.3 ರಿಂದ 5ರವರ ಜಮೀನು ಇರುತ್ತದೆ ಎಂದರೆ ಸರಿ.

ಪಾಟಿ ಸವಾಲು 2 ರಿಂದ 5 ಎದುರುದಾರಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಹೆ.ದಿ.&ನ್ಯಾದಂ., ಗೋಕಾಕ.